International Journal of Kannada Research 2020; 6(2): 08-09

International Journal of Kannada Research
www.kannadajournal.com

**ISSN: 2454–5813**
IJKR 2020; 6(2): 08-09
© 2020 IJKR
www.kannadajournal.com
Received: 05-01-2020
Accepted: 07-02-2020

**ಡಾ. ಜ್ಯೋತಿ ರೈ**
ಉಪನ್ಯಾಸಕರು, ಕನ್ನಡ ವಿಭಾಗ
ಆಳ್ವಾಸ್ ಕಾಲೇಜು,
ಮೂಡುಬಿದಿರಿ

**Corresponding Author:**
**ಡಾ. ಜ್ಯೋತಿ ರೈ**
ಉಪನ್ಯಾಸಕರು, ಕನ್ನಡ ವಿಭಾಗ
ಆಳ್ವಾಸ್ ಕಾಲೇಜು,
ಮೂಡುಬಿದಿರಿ

# ಸ್ವಾತಂತ್ರ್ಯ ಚಳುವಳಿ ಮತ್ತು ಕನ್ನಡನಾಡು

## ಡಾ. ಜ್ಯೋತಿ ರೈ

ಭಾರತದೇಶದ ಸ್ವಾತಂತ್ರ್ಯ ಚಳುವಳಿ ನಮ್ಮ ಮೈನವಿರೇಳಿಸುವ, ದೇಶ ಭಕ್ತಿಯನ್ನು ಉಕ್ಕಿಸುವ ಲಕ್ಷಾಂತರ ಜನರ ತ್ಯಾಗ ಬಲಿದಾನವನ್ನು ನೆನಪಿಸುವ ಒಂದು ಮಹಾಗಾಥೆ. ಭಾರತಾಂಬೆಯನ್ನು ಪರಕೀಯರಿಂದ ಮುಕ್ತಿಗೊಳಿಸಲು ದೇಶದ ಮೂಲೆ ಮೂಲೆಯಲ್ಲೂ ಸ್ವಾತಂತ್ರ್ಯದ ಕಹಳೆ ಮೊಳಗಿದೆ. ಹಲವಾರು ಘಟನೆಗಳು ಇತಿಹಾಸದಲ್ಲಿ ದಾಖಲಾದರೂ ಕೆಲವೊಂದು ಘಟನೆಗಳು ಚರಿತ್ರೆಯಲ್ಲಿ ಪಡೆಯಬೇಕಾದ ಮಹತ್ವವನ್ನು ಪಡೆಯದೆ ಸತ್ಯವನ್ನು ತಿರುಚಲಾಗಿದೆ. ಕನ್ನಡ ನಾಡು ಕೂಡಾ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ.

1800ರ ಆರಂಭದಿಂದ 1867ರವರೆಗೆ ಕನಾಟಕದ ವಿವಿಧ ಪ್ರದೇಶಗಳಲ್ಲಿ ಬ್ರಿಟಿಷರ ವಿರುದ್ಧ ಅನೇಕ ಬಂಡಾಯಗಳಾಗಿವೆ. ಬ್ರಿಟಿಷರಿಗೆ ಪ್ರಪ್ರಥಮವಾಗಿ ಭಾರತದಲ್ಲಿ ಗಟ್ಟಿಯಾಗಿ ತಳವೂರುವುದು ಅಷ್ಟು ಸುಲಭವಲ್ಲ ಎಂಬ ಬಿಸಿ ತಟ್ಟಿಸಿದವನು ಧೋಂಡಿಯಾ ವಾಘ್. ಇವನ ನೇತೃತ್ವದಲ್ಲಿ ಶಿವಮೊಗ್ಗ, ಬಿದನೂರು, ಶಿಕಾರಿಪುರದಲ್ಲಿ ದೇಶೀಯ ಸೈನ್ಯ ಸಿದ್ಧಗೊಂಡಿತು. ಇವನು ತಮಿಳುನಾಡು, ಕೇರಳ, ಮಲಬಾರ್ ಮುಂತಾದ ಕಡೆಯ ಬ್ರಿಟಿಷ್ ವಿರೋಧಿ ಅರಸೊರಡನೆ ಸಂಪರ್ಕ ಬೆಳೆಸಿದನು. ಮಾಹೆಯಲ್ಲಿದ್ದ ಫ್ರೆಂಚರು ಕೂಡಾ ಅವನನ್ನು ಪ್ರೋತ್ಸಾಹಿಸಿದರು. ವಿಟ್ಲದ ಡೊಂಬ ಹೆಗಡೆ ಅರಸನು ಅವನನ್ನು ಕೂಡಿಕೊಂಡನು. ದಕ್ಷಿಣ ಕನ್ನಡ ಜಿಲ್ಲೆಯ ಜಮಾಲಬಾದ್ ಕೋಟೆ, ಧಾರವಾಡ ಜಿಲ್ಲೆಯ ಸವಣೂರು, ರಾಣಿಬೆನ್ನೂರು, ಹಾನಗಲ್ಲು, ಡಂಬಳ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಇವನ ವಶವಾಗುತ್ತದೆ.

ಬ್ರಿಟಿಷ್ ದಾಖಲೆಯ ಆಧಾರದಲ್ಲಿ ಹೇಳುವುದಾದರೆ ಅವನ ಬಳಿ 90,000 ಅಶ್ವಾರೋಹಿಗಳು, 24,000 ಕಾಲಾಳುಗಳ ಪಡೆ ಇತ್ತು. ಕೊನೆಗೆ ಆರ್ಥರ್ ವೆಲ್ಲೆಸ್ಲಿಯ ನೇತೃತ್ವದಲ್ಲಿ ಬೃಹತ್ ಪ್ರಮಾಣದಲ್ಲಿ ಸೈನ್ಯವನ್ನು ಬಳಸಿ ಅವನನ್ನು ಹತ್ತಿಕ್ಕಲಾಯಿತು. 1800ರಲ್ಲಿ ರಾಯಚೂರಿನ ಕೋಣಗಲ್‌ನಲ್ಲಿ ಅವನನ್ನು ಕೊಲ್ಲಲಾಯಿತು.

ಎಡ್ವರ್ಡ್ ಕ್ಲೈವ್ ಧೋಂಡಜಿಯ ಈ ದಂಗೆಯನ್ನು ಕುರಿತು ಹೀಗೆ ಹೇಳುತ್ತಾನೆ – “ ಅವನ ಪ್ರತಿರೋಧವು ಎಷ್ಟೊಂದು ಬಲಶಾಲಿಯಾಗಿತ್ತು ಮತ್ತು ಎಷ್ಟೊಂದು ಕಾರ್ಯಕ್ಷಮತೆಯಿಂದ ಅವನು ಅದನ್ನು ಸಂಘಟಿಸಿದನೆಂದರೆ, ತೀರಾ ಸಾಮಾನ್ಯ ಅವ್ಯವಸ್ಥಿತ ಬಂಡೇ ಆಗಿದ್ದ ಅದು ಒಂದು ವಿದೇಶಿ ಯುದ್ಧದ ಮಟ್ಟಕ್ಕೇರಿತು”. ಕ್ಲೈವ್‌ನ ಈ ಮಾತುಗಳು ಧೋಂಡಜಿಯ ದಂಗೆಯ ತೀವ್ರತೆಯನ್ನು ನಮಗೆ ಮನಗಾಣಿಸುತ್ತದೆ.

ಕಿತ್ತೂರು ಹಲವಾರು ಬಂಡಾಯಗಳ ತಾಣ. ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿಯ ರಾಯಣ್ಣ 1824 ರಿಂದ 1829ರವರೆಗೆ ಬ್ರಿಟಿಷರ ನಿದ್ದೆಕೆಡಿಸಿದುದು ಮಾತ್ರವಲ್ಲದೆ ಬ್ರಿಟಿಷ್ ಅಧಿಕಾರಿ ಥ್ಯಾಕರೆಯು ಯುದ್ಧದಲ್ಲಿ ಮರಣಹೊಂದುತ್ತಾನೆ. ಅವರು ಹೊತ್ತಿಸಿದ ಸ್ವಾತಂತ್ರ್ಯದ ಕಿಡಿ 1942ರ ಚಳುವಳಿಯಲ್ಲೂ ಹೊತ್ತಿ ಉರಿಯುತ್ತದೆ. 1942ರಲ್ಲಿಯೂ ಚೆನ್ನಪ್ಪವಾಲಿಯವರ ನೇತೃತ್ವದಲ್ಲಿ ಬೃಹತ್ ಪ್ರಮಾಣದ ಪ್ರತಿಭಟನೆಯು ಬ್ರಿಟಿಷರ ವಿರುದ್ಧ ನಡೆಯುತ್ತದೆ.

1835ರಿಂದ 1837ರವರೆಗೆ ಆಗಿನ ಕೊಡಗು ಜಿಲ್ಲೆಗೆ ಸೇರಿದ್ದ ಅಮರ ಸುಳ್ಯದಲ್ಲಿ ದೊಡ್ಡ ಮಟ್ಟದಲ್ಲಿ ಹಾಗೂ ಸಂಘಟಿತ ಮಟ್ಟದಲ್ಲಿ ಬ್ರಿಟಿಷರ ವಿರುದ್ಧ ಬಂಡಾಯ ನಡೆಯುತ್ತದೆ. ಅಮರ ಸುಳ್ಯದಲ್ಲಿ ನಡೆದ ಈ ಸ್ವಾತಂತ್ರ್ಯ ಸಮರವನ್ನು ಜನಸಾಮಾನ್ಯರು ‘ಕಲ್ಯಾಣಪ್ಪನ ಕಾಟಕಾಯಿ’ ಎಂದು ಕರೆಯುತ್ತಾರೆ. ಬ್ರಿಟಿಷ್ ಇತಿಹಾಸಕಾರರಿಂದಾಗಿ ಅಮರ ಸುಳ್ಯದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವು ‘ಕಾಟಕಾಯಿ’ (ಲೂಟಿ) ಯಾಗಿ ಮಾರ್ಪಾಡು ಹೊಂದುತ್ತದೆ. 1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು

ಕೇವಲ 'ಸಿಪಾಯಿದಂಗೆ'ಯಾಗಿ ಮಾರ್ಪಾಡು ಹೊಂದಿದ ಹಾಗೆ. ಬ್ರಿಟಿಷರು ಮೋಸದಿಂದ ಕೊಡಗಿನ ರಾಜ ಚಿಕ್ಕವೀರ ರಾಜೇಂದ್ರನನ್ನು ಪದಚ್ಯುತಗೊಳಿ ಕೊಡಗನ್ನು ವಶಪಡಿಸಿಕೊಂಡರು. ಇದು ಬೋಪುದಿವಾನನಂತಹ ಕೆಲವು ದೇಶದ್ರೋಹಿಗಳನ್ನು ಹೊರತುಪಡಿಸಿ ಕೊಡಗಿನ ಪ್ರಜೆಗಳ ಅಸಂತಷ್ಟಿಗೆ ಕಾರಣವಾಗುತ್ತದೆ. ಕೊಡಗಿನಿಂದ ಬ್ರಿಟಿಷರನ್ನು ಓಡಿಸಿ ಚಿಕ್ಕವೀರ ರಾಜನ ಆಳ್ವಿಕೆಯನ್ನು ಮರುಸ್ಥಾಪಿಸಲು ಕೊಡಗಿನ ಪ್ರಜೆಗಳು ನಿರ್ಧರಿಸುತ್ತಾರೆ. ರಾಜವಂಶದ ಪ್ರತಿನಿಧಿಯಾಗಿದ್ದ ಸ್ವಾಮಿ ಅಪರಾಂಪರನೆಂಬ ಜಂಗಮನು ಕೂಡಾ ಕೊಡಗಿನಲ್ಲಿ ರಾಜನ ಆಡಳಿತವನ್ನು ಮರುಸ್ಥಾಪಿಸಲು ಜನಸಂಘಟನೆಯನ್ನು ಮಾಡುತ್ತಾನೆ. ಆದರೆ ಅವನನ್ನು ಬ್ರಿಟಿಷರು ಸೆರೆಹಿಡಿಯುತ್ತಾರೆ.

ತಾನು ಕೊಡಗಿನ ರಾಜವಂಶದವನೆಂದು ಹೇಳುತ್ತಾ ಕಲ್ಯಾಣಸ್ವಾಮಿ ಎಂಬಾತ ದಂಗೆಯನ್ನು ನಡೆಸಲು ಜನರನ್ನು ಸಂಘಟಿಸುತ್ತಾನೆ. ಆದರೆ 1837ರಲ್ಲಿ ಅವನು ಕೂಡಾ ಬ್ರಿಟಿಷರ ಬಂಧನಕ್ಕೆ ಒಳಗಾಗುತ್ತಾನೆ. ಆಗ ಕಲ್ಯಾಣಪ್ಪನ ಹೆಸರಿನಲ್ಲಿ ಪುಟ್ಟ ಬಸವ ಎಂಬಾತನನ್ನು ಹುಲಿಕಡಿದ ನಂಜಯ್ಯ ಪೂಮಾಲೆ ಬೆಟ್ಟದಲ್ಲಿ ಆತನನ್ನು ಇರಿಸಿಕೊಂಡು ನಾನಾ ಭಾಗದ ಜನರಿಗೆ ಪರಿಚಯಿಸುತ್ತಾನೆ. ಇವನಿಂದ ಆರಂಭವಾದ ಬಂಡಾಯವು ದಕ್ಷಿಣಕನ್ನಡ ಜಿಲ್ಲೆಯಾದ್ಯಂತ ಪಸರಿಸುತ್ತದೆ. ಬೆಳ್ಳಾರೆ, ಸುಳ್ಯ, ಪುತ್ತೂರು, ಬಂಟ್ವಾಳ, ವಿಟ್ಲ, ಹೀಗೆ ಎಲ್ಲಾ ಕಡೆಯಲ್ಲೂ ಜನರು ತಂಡೋಪತಂಡವಾಗಿ ಕಲ್ಯಾಣಪ್ಪನ ದಂಡನ್ನು ಸೇರಿಕೊಳ್ಳುತ್ತಾರೆ. ಚಿಕ್ಕ ತೊರೆಯಾಗಿ ಹೊರಟ ಈ ದಂಡು ಮಂಗಳೂರನ್ನು ತಲುಪುವಷ್ಟರಲ್ಲಿ ಮಹಾನದಿಯಾಗಿ ಮಾರ್ಪಾಡುಹೊಂದುತ್ತದೆ. ದಾರಿ ಮಧ್ಯದಲ್ಲಿ ಅನೇಕ ಖಜಾನೆಗಳನ್ನು ಈ ದಂಡು ವಶಪಡಿಸಿಕೊಳ್ಳತ್ತದೆ. ಚೆಟ್ಟಿ ಮತ್ತು ಕರ್ತು ಎಂಬ ವೀರ ಕುಡಿಯ ಸಹೋದರರು ಈ ದಂಡಿನಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಬಂಗಾಡಿಯ ಅರಸ ಲಕ್ಷ್ಮಪ್ಪ ಬಂಗರಸ ಕೂಡಾ ಕಲ್ಯಾಣಪ್ಪನ ದಂಡನ್ನು ಸೇರಿಕೊಳ್ಳುತ್ತಾನೆ.

ಎಪ್ರಿಲ್ 5ರಂದು ಮಂಗಳೂರು ತಲುಪಿದ ಈ ದಂಡು ಬಾವುಟಗುಡ್ಡದಲ್ಲಿ ಹಾರಾಡುತ್ತಿದ್ದ ಬ್ರಿಟಿಷ್ ಧ್ವಜವನ್ನು ಕೆಳಗಿಳಿಸಿ ತಮ್ಮ ಧ್ವಜಾರೋಹಣ ಮಾಡುತ್ತಾರೆ. ಹದಿಮೂರು ದಿನಗಳವರೆಗೆ ಬ್ರಿಟಿಷರನ್ನು ಮಂಗಳೂರಿನಿಂದ ಓಡಿಸಿ ಮಂಗಳೂರನ್ನು ತಮ್ಮ ವಶಪಡಿಸಿಕೊಳ್ಳತ್ತಾರೆ. ಅದರೆ ಕೊನೆಗೂ ಬ್ರಿಟಿಷರ ಆಧುನಿಕ ಶಸ್ತ್ರಾಸ್ತ್ರಗಳು, ಹಾಗೂ ಬೋಪುದಿವಾನನಂತಹ ದೇಶದ್ರೋಹಿಗಳಿಂದಾಗಿ ಕೊಡಗಿನ ವೀರರು ಬ್ರಿಟಿಷರ ವಶವಾಗುತ್ತಾರೆ. ಸೆರೆಸಿಕ್ಕಿದ್ದ ದಂಗೆಯ ಪ್ರಮುಖರಾದ ಪುಟ್ಟಬಸವ, ಕಲ್ಯಾಣಸ್ವಾಮಿ, ಲಕ್ಷ್ಮಪ್ಪ ಬಂಗರಸ, ಉಪ್ಪಿನಂಗಡಿ ಮಂಜ, ಗುಡ್ಡೆ ಅಪ್ಪಯ್ಯನನ್ನು ಮಂಗಳೂರಿನ ಬಿಕರ್ನಕಟ್ಟೆಯಲ್ಲಿ ಗಲ್ಲಿಗೇರಿಸುತ್ತಾರೆ. ಇಂತಹ ಕಲ್ಯಾಣಪ್ಪನನ್ನು ಬ್ರಿಟಿಷ್ ಇತಿಹಾಸಕಾರರು 'ದರೋಡೆಕೋರ, ಲೂಟಿಗಾರ' ಎಂಬಂತೆ ಚಿತ್ರಿಸಿದರು. ಆತ ಪುಂಡನೆಂಬುದಕ್ಕೆ ಯಾವ ಆಧಾರವೂ ಇಲ್ಲ. ಆತ ಲೂಟಿ ಮಾಡಿದುದು ಬ್ರಿಟಿಷ್ ಖಜಾನೆಯನ್ನು ಹೊರತು ದೇಶಿಯ ಪ್ರಜೆಗಳ ಸಂಪತ್ತನ್ನಲ್ಲ. ಕಲ್ಯಾಣಸ್ವಾಮಿಯ ದಂಗೆ ಅಡಗಿಸಲು ನೆರವಾದ ಬೋಪುದಿವಾನ ಮತ್ತು ಆತನ ಜನರಿಗೆ ಕಂಪನಿ ಸರಕಾರವು ಮೂರು ತಲೆಮಾರುವರೆಗೆ ಪೆನ್ಷನ್ನನ್ನು, ಚಿನ್ನ, ಬೆಳ್ಳಿ, ಬಂಗಾರವನ್ನೂ ಕೊಟ್ಟರೆಂದರೆ ಆ ದಂಗೆಯ ತೀವ್ರತೆ ಹಾಗೂ ಬ್ರಿಟಿಷರನ್ನು ಅದು ನಡುಗಿಸಿದ ರೀತಿ ನಮಗೆ ಅರ್ಥವಾಗಬಹುದು.

ಕನ್ನಡ ನಾಡಿನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಇನ್ನೊಂದು ಪ್ರಮುಖ ಘಟನೆಯಂದರೆ ಈಸೂರು ಎನ್ನುವ ಚಿಕ್ಕ ಊರಿನಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮ ಹಾಗೂ ಭಾರತಮಾತೆಯ ಬಂಧಮುಕ್ತಿಗಾಗಿ ಐವರು ವೀರಪುತ್ರರ ತಲೆದಂಡ. 1942 ಸೆಪ್ಟೆಂಬರ್ 28ರಂದು ಈಸೂರಿನಲ್ಲಿ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲೊಂದು ರಕ್ತಸಿಕ್ತ ಅಧ್ಯಾಯಕ್ಕೆ ನಾಂದಿಯಾಗುತ್ತದೆ. ಆ ದಿನ ಸಬ್‌ಇನ್ಸ್‌ಪೆಕ್ಟರು ಕೆಂಚೇಗೌಡರು ಈಸೂರಿನ ಜನತೆಯ ಮೇಲೆ ಗುಂಡು ಹಾರಿಸಿದರು. ಕೊನೆಗೆ ಊರಿನ ಜನರೆಲ್ಲರೂ ಸೇರಿ ಸಬ್‌ಇನ್ಸ್‌ಪೆಕ್ಟರ್ ಕೆಂಚೇಗೌಡ ಹಾಗೂ ಅಮಲ್ದಾರ ಚೆನ್ನಕೃಷ್ಣಯ್ಯನವರ ಹೆಣವನ್ನು ಉರುಳಿಸುತ್ತಾರೆ. ಯಾವುದೇ ಸಾಕ್ಷಿ ಪುರಾವೆಗಳಿಲ್ಲದೆ ಈಸೂರಿನ ಬಹಳಷ್ಟು ಜನರ ಬಂಧನವಾಗುತ್ತದೆ. ಈಸೂರಿನಲ್ಲಿ ಕ್ರಾಂತಿಯ ಕಹಳೆ ಹಬ್ಬುತ್ತದೆ. ಕೊನೆಗೆ ಗುರಪ್ಪ, ಮಲ್ಲಪ್ಪ, ಶಂಕರಪ್ಪ, ಹಾಲಪ್ಪ ಹಾಗೂ ಸೂರ್ಯನಾರಾಯಣಾಚಾರ್– ಈ ಐದು ಜನರಿಗೆ ಮರಣದಂಡನೆಯಾಗುತ್ತದೆ. 1943 ಎಪ್ರಿಲ್ 6,7,8 ಕನ್ನಡ ನಾಡಿನ ಇತಿಹಾಸದಲ್ಲಿ ಮರೆಯಲಾಗದ ದಿನಗಳು. ಈ ಮೂರೂ ದಿನಗಳಲ್ಲಿ ಈಸೂರಿನ ವೀರರೈವರು ಬ್ರಿಟಿಷ್ ಸರಕಾರ ನೀಡಿದ ಮರಣದಂಡನೆಗೆ ಗುರಿಯಾದರು.

ಹೀಗೆ ಕನ್ನಡನಾಡೊಂದರಲ್ಲಿಯೇ ಸ್ವಾತಂತ್ರ್ಯಮಾತೆಯ ಪಾದಗಳಿಗೆ ತಮ್ಮ ತಲೆಯನ್ನೇ ಅರ್ಪಿಸಿದವರು ಹಲವರು. ಹೀಗೆ ದೊರೆತ ಸ್ವಾತಂತ್ರ್ಯವನ್ನು ನಾವಿಂದು ದುರುಪಯೋಗಪಡಿಸುವುದು ಎಷ್ಟು ಸರಿಯೆಂಬ ಪ್ರಶ್ನೆಯನ್ನು ನಮಗೆ ನಾವೇ ಕೇಳಿಕೊಳ್ಳುವ ಅನಿವಾರ್ಯತೆಯಿದೆ.

**ಪರಾಮರ್ಶನ ಗ್ರಂಥಗಳು:**


1. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು: ಎನ್.ಪಿ.ಶಂಕರನಾರಾಯಣ ರಾವ್, ನವಕರ್ನಾಟಕ ಪ್ರಕಾಶನ, 2011
2. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸೂರ್ಯನಕಾಮತ್(ಸಂಪಾದಕರು) ಗೀತಾಬುಕ್ ಹೌಸ್, ಮೈಸೂರು, 1980
3. ಡಾ. ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು ಎಸ್.ಆರ್.ರಾಮಸ್ವಾಮಿ (ಸಂಪಾದಕರು) ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, 1997
4. ಅಮರ ಸುಳ್ಯದ ಸ್ವಾತಂತ್ರ್ಯ ಸಮರ ಎನ್.ಎಸ್.ದೇವಿಪ್ರಸಾದ್ ಸಂಪಾಜೆ ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು.
5. ಈಸೂರಿನ ಚಿರಂಜೀವಗಳು(ಕಾದಂಬರಿ) ಆರ್. ಬಸವರಾಜ್, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, 1975